ನಗರ ಆಶ್ರಯ

ಸೂಕ್ತವಾದ ಜಮೀನುಗಳು ಲಭಿಸದೇ ಇರುವುದರಿಂದ ನಿವೇಶನಗಳ ಹಂಚಿಕೆ ಮಾಡಿ ಸರ್ಕಾರದ ಗುರಿಯಂತೆ ಮನೆಗಳನ್ನು ಕಟ್ಟಲು ಸಾಧ್ಯವಾಗಿರುವುದಿಲ್ಲ.

ಗ್ರಾಮೀಣ ಆಶ್ರಯ

ಧಾರವಾಡ ಗ್ರಾಮೀಣ ಆಶ್ರಯ ಸಮಿತಿ ಸಭೆಯಲ್ಲಿ ಹಾಗೂ ಆಶ್ರಯ ಯೋಜನೆಯ ಮಾರ್ಗಸೂಚಿಯನ್ವಯ ಆಯ್ಕೆ ಮಾಡಿದ ಫಲಾನುಭವಿಗಳಿಗೆ ಗೃಹ ನಿರ್ಮಾಣದ ಕಾರ್ಯವನ್ನು ಕೈಗೊಳ್ಳಲಾಗಿದೆ.

ಬಿಜಾಪುರ ಜಿಲ್ಲೆಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ನೇಮಕಾತಿ ಆದೇಶ ನೀಡಲು ವಿಳಂಬವಾಗುತ್ತಿರುವುದು

1718 (2053) ಶ್ರೀ ಬಳ್ಳುಬ್ಬ ಸಂಗಪ್ಪ ಕಲ್ಲಪ್ಪ : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಯಲ್ಲಿ ನೂತನವಾಗಿ ನೇಮಕಗೊಂಡಿರುವ ಶಿಕ್ಷಕರುಗಳು ಎಷ್ಟು ಜನ? ಇವರುಗಳೆಲ್ಲಾ ಜಿಲ್ಲಾ ಮಟ್ಟದಲ್ಲಿ ನೇಮಕಗೊಂಡವರೇ ಅಥವಾ ರಾಜ್ಯ ಮಟ್ಟದ ಅರ್ಹತಾ ಪರೀಕ್ಷೆ ಮೂಲಕ ಆಯ್ಕೆಗೊಂಡಂತಹವರೇ (ವಿವರ ನೀಡುವುದು)

ಆ) ನೇಮಕಗೊಂಡಿರುವಂತಹ ಈ ಪ್ರಾಥಮಿಕ ಶಾಲಾ ಶಿಕ್ಷಕರುಗಳಿಗೆ ನೇಮಕಾತಿ ಆದೇಶ ನೀಡಲು ವಿಳಂಬವಾಗಲು ಕಾರಣಗಳೇನು?

ಇ) ಯಾವಾಗ ನೇಮಕಾತಿ ಆದೇಶ ನೀಡಲಾಗುವುದು?

ಈ) ಈ ನಿಟ್ಟಿನಲ್ಲಿ ಸರ್ಕಾರದ ನಿಲುವೇನು?

ಉ) ಶಿಕ್ಷಕರುಗಳ ಕೊರತೆ ಇರುವ ಜಾಗಕ್ಕೆ ಶಿಕ್ಷಕರನ್ನು ನೇಮಿಸಿದಿದ್ದಲ್ಲಿ ಪಾಠ ಪ್ರವಚನಕ್ಕೆ ವಿದ್ಯಾರ್ಥಿಗಳಿಗೆ ತೊಂದರೆಯುಂಟಾಗುವುದಿಲ್ಲವೆ? (ವಿವರ ನೀಡುವುದು)

ಪ್ರೊ।। ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಬಿಜಾಪುರ ಜಿಲ್ಲೆಯಲ್ಲಿ 2001-2002ರ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಯಲ್ಲಿ ಆಯ್ಕೆಗೊಂಡಿರುವ ಶಿಕ್ಷಕರು-454

ಈ ಶಿಕ್ಷಕರ ಆಯ್ಕೆ ಜಿಲ್ಲಾ ಮಟ್ಟದಲ್ಲಿ ನಡೆದಿದೆ. ಹಾಗೂ ಎಲ್ಲಾ ಜಿಲ್ಲೆಗಳಲ್ಲಿ ಒಂದೇ ದಿನ ನಡೆಸಲಾದ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಬಿಜಾಪುರ ಜಿಲ್ಲೆಯಲ್ಲಿ ಅರ್ಹತೆ ಹೊಂದಿದವರು.

ಆ) ಆಯ್ಕೆ ಹೊಂದಿರುವ ಈ ಶಿಕ್ಷಕರುಗಳ ಆಯ್ಕೆ ಪಟ್ಟಿಗೆ ಕೆ.ಎ.ಟಿ ನ್ಯಾಯಾಲಯದಿಂದ ತಡೆಯಾಜ್ಞೆ ಇರುವುದರಿಂದ ನೇಮಕಾತಿ ಆದೇಶ ನೀಡುವಲ್ಲಿ ವಿಳಂಬವಾಗಿದೆ.

ಇ) ನ್ಯಾಯಾಲಯದ ತಡೆಯಾಜ್ಞೆ ತೆರವುಗೊಂಡ ಕೂಡಲೇ ನೇಮಕಾತಿ ಆದೇಶ ನೀಡಲಾಗುವುದು.

ಈ) ನ್ಯಾಯಾಲಯದ ತಡೆಯಾಜ್ಞೆ ಇರುವುದರಿಂದ ಆಯ್ಕೆಗೊಂಡ ಶಿಕ್ಷಕರಿಗೆ ನೇಮಕಾತಿ ಆದೇಶ ನೀಡುವಲ್ಲಿ ವಿಳಂಬವಾಗಿದೆ. ಈ ತಡೆಯಾಜ್ಞೆಯನ್ನು ತೆರವುಗೊಳಿಸಲು ಅಗತ್ಯ ಕ್ರಮ

ಕೈಗೊಂಡಿದ್ದು ನ್ಯಾಯಾಲಯದಲ್ಲಿ ವಾದ-ವಿವಾದ ಮುಗಿದಿದ್ದು ನ್ಯಾಯಾಲಯ ತೀರ್ಪನ್ನು ಕಾಯ್ದಿರಿಸಿದೆ.

ತೀರ್ಪು ಹೊರ ಬಿದ್ದೊಡನೆ ಮುಂದಿನ ಕ್ರಮ ಕೈ ಗೊಳ್ಳಲಾಗುವುದು.

ಉ) ಈ ಕಾರಣದಿಂದ ಕೊರತೆ ಇರುವ ಶಾಲೆಗಳಿಗೆ ಅಕ್ಕಪಕ್ಕದ ಶಾಲೆಗಳಲ್ಲಿನ ಹೆಚ್ಚುವರಿ ಶಿಕ್ಷಕರನ್ನು ನಿಯೋಜಿಸಿ ಪಾಠ ಪ್ರವಚನಗಳಿಗೆ ತೊಂದರೆ ಆಗದಂತೆ ಏರ್ಪಾಟು ಮಾಡಲಾಗುತ್ತಿದೆ.

ಮಂಡ್ಯ ಜಿಲ್ಲೆಯಲ್ಲಿ ವಯಸ್ಕರ ಶಿಕ್ಷಣ ಇಲಾಖೆಯ ಕಾರ್ಯ ವೈಖರಿ

1719 (2059) ಶ್ರೀ ಚಲುವರಾಯ ಸ್ವಾಮಿ ಎನ್ (ನಾಗಮಂಗಲ) : ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯಗಳು, ಮುದ್ರಣ ಹಾಗೂ ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯಲ್ಲಿ ವಯಸ್ಕರ ಶಿಕ್ಷಣ ಇಲಾಖೆ ಸರಿಯಾದ ರೀತಿಯಲ್ಲಿ ಕಾರ್ಯನಿರ್ವಹಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ನಾಗಮಂಗಲ ತಾಲ್ಲೂಕಿಗೆ ಇಲ್ಲಿಯವರೆವಿಗೂ ಮಂಜೂರಾಗಿರುವ ಗ್ರಂಥಾಲಯಗಳ ಸಂಖ್ಯೆ ಎಷ್ಟು? ಮುಂದೆ ಮಂಜೂರಾಗುವ ಹೊಸ ಗ್ರಂಥಾಲಯಗಳು ಯಾವುವು?

ಶ್ರೀ ಬಾಬುರಾವ್ ಚವ್ಹಾಣ (ವಯಸ್ಕರ ಶಿಕ್ಷಣ ಗ್ರಂಥಾಲಯಗಳು, ಮುದ್ರಣ ಹಾಗೂ ಲೇಖನ ಸಾಮಗ್ರಿಗಳ ರಾಜ್ಯ ಸಚಿವರು)

ಅ) ಮಂಡ್ಯ ಜಿಲ್ಲೆಯಲ್ಲಿ ವಯಸ್ಕರ ಶಿಕ್ಷಣ ಇಲಾಖೆಯು ಸರಿಯಾಗಿ ಕಾರ್ಯನಿರ್ವಹಿಸುತ್ತಿದೆ.

ಆ) 17 ಗ್ರಂಥಾಲಯಗಳು ಮಂಜೂರಾಗಿವೆ. 2002-03ನೇ ಸಾಲಿಗೆ ಈ ಕೆಳಗಿನಂತೆ 9 ಗ್ರಂಥಾಲಯಗಳನ್ನು ಮಂಜೂರು ಮಾಡಲು ಪ್ರಸ್ತಾವನೆ ಬಂದಿದೆ. ಅವುಗಳಲ್ಲಿ ಹಣಕಾಸಿನ ಪರಿಮಿತಿಯಲ್ಲಿ ಹಂತ ಹಂತವಾಗಿ ಹೊಸ ಗ್ರಂಥಾಲಯಗಳನ್ನು ಪ್ರಾರಂಭಿಸುವ ಯೋಜನೆ ಇದೆ.

1) ಮಾಯಗೋವಹಳ್ಳಿ 2) ದೆಡ್ಡಬಾಲ 3) ಹೂಡಿಕೆರೆ 4) ಬ್ರಹ್ಮದೇವರಹಳ್ಳಿ 5) ಮಣ್ಣಹಳ್ಳಿ 6) ಹೊನ್ನಾವರ 7) ಕರಡಹಳ್ಳಿ 8) ಕಾಂತಪುರ 9) ಪಾಲಗ್ರಹಾರ.

ನಾಗಮಂಗಲ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಕುರಿತು

1720 (2060) ಶ್ರೀ ಚಲುವರಾಯ ಸ್ವಾಮಿ (ನಾಗಮಂಗಲ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಾಗಮಂಗಲ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಖಾಸಗಿ ಪಿಯುಸಿ ಕಾಲೇಜು (ಮಾದರಿ ಶಾಲೆ) ಆಡಳಿತ ಮಂಡಳಿಯು ನೌಕರರ ನೇಮಕಾತಿಯಲ್ಲಿ ಸರ್ಕಾರದ ನಿಯಮಾನುಸಾರ ನೇಮಕಾತಿ ಮಾಡಿಕೊಳ್ಳದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಮೀಸಲಾತಿ ಅನುಸರಿಸಿದ್ದಾರೆಯೇ? ಅನುಸರಿಸದಿದ್ದಲ್ಲಿ ಆಡಳಿತ ಮಂಡಳಿಯ ವಿರುದ್ಧ ಸರ್ಕಾರದ ಕ್ರಮವೇನು?

ಇ) ಈ ಕ್ಷೇತ್ರದಲ್ಲಿ ಕಳೆದ ಎರಡು ವರ್ಷಗಳಿಂದ ಶಿಕ್ಷಣ ಇಲಾಖೆಯಲ್ಲಿ ನಡೆದಂತಹ ವರ್ಗಾವಣೆ ಮತ್ತು ಸರ್ಕಾರದ ಮಾರ್ಗಸೂಚಿಗಳ ಪ್ರಕಾರ ನಡೆದಿದೆಯೇ ನಡೆಯದಿದ್ದಲ್ಲಿ ಕೈಗೊಳ್ಳುವ ಕ್ರಮವೇನು?